ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಅಬಕಾರಿ ಇಲಾಖೆಯ ತೆರಿಗೆ ಬಾಕಿ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

428 (502) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕಳೆದ 3 ವರ್ಷಗಳಿಂದ ವಿವಿಧ ವರ್ಗಗಳ ಪರವಾನಗಿಯಿಂದ /ಅಬಕಾರಿ ಗುತ್ತಿಗೆದಾರರಿಂದ ಹಾಗೂ ಡಿಸ್ಟಲರಿಗಳಿಂದ ಅಬಕಾರಿ ಇಲಾಖೆಗೆ ಬರಬೇಕಾಗಿರುವ ಬಾಕಿ ತೆರಿಗೆ ಹಣವೆಷ್ಟು; (ಡಿಸ್ಟಲರಿವಾರು/ಕಂಪನಿವಾರು/ಇವುಗಳ ಮಾಲೀಕರು/ಸಂಪೂರ್ಣ ಮಾಹಿತಿ ನೀಡುವುದು)

(ಆ) ಈ ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ಇಲ್ಲಿಯವರೆಗೂ ವಸೂಲು ಮಾಡದಿರಲು ಕಾರಣವೇನು; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ಎಷ್ಟು ವರ್ಷಗಳ ಬಾಕಿ ಇಟ್ಟುಕೊಂಡಿದ್ದಾರೆ. (ವಿವರ ನೀಡುವುದು)

(ಇ) ಬಾಕಿ ಉಳಿಸಿಕೊಂಡಿರುವ ತೆರಿಗೆ ಹಣವನ್ನು ಎಷ್ಟು ದಿವಸಗಳಲ್ಲಿ ವಸೂಲು ಮಾಡಲಾಗುವುದು; (ವಿವರ ನೀಡುವುದು)

(ಈ) ಈ ಹಿಂದೆ ಅಬಕಾರಿ ಇಲಾಖೆಯಿಂದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಮುಂದೆ ಪ್ರಕರಣಗಳಿರುವ ಅಂಶವನ್ನು ಅಬಕಾರಿ ಇಲಾಖೆ ಆಯುಕ್ತರು ಸ್ಪಷ್ಟಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಪ್ರಕರಣಗಳು ಎಷ್ಟಿವೆ? (ಸಂಪೂರ್ಣ ವಿವರ ನೀಡುವುದು)